ಸಾಮಾನ್ಯತೆಯ ಶ್ರೀಮೂರ್ತಿ ಶ್ರೀರಾಮಕೃಷ್ಣ

ಶ್ರೀರಾಮಕೃಷ್ಣ ಅವತಾರದ ಒಂದು ಪ್ರಮುಖ ವೈಶಿಷ್ಟ್ಯವೆಂದರೆ ಸರಳತೆ. ಶ್ರೀರಾಮಕೃಷ್ಣರು ಯಾವ ಆಡಂಬರದ ಸೋಗೂ ಇಲ್ಲದೆ ಸಾಮಾನ್ಯರಂತೆ ಬಾಳಿದವರು. ಈ ಸಾಮಾನ್ಯತೆಯ ಪ್ರಬುದ್ಧ ಜಿಜ್ಞಾಸೆ ಮತ್ತು ಶ್ರೀರಾಮಕೃಷ್ಣರು ಅದನ್ನು ತಮ್ಮ ಜೀವನದಲ್ಲಿ ಪ್ರಕಟಿಸಿದ ಚೇತೋಹಾರಿ ವರ್ಣನೆ ಈ ಲೇಖನದ ವಸ್ತುವಿಷಯ. ಲೇಖಕರು ಪ್ರಸಿದ್ಧ ವಾಗ್ಮಿಗಳು ಮತ್ತು ಬರಹಗಾರರು. ಪ್ರಸ್ತುತ ಬೆಂಗಳೂರಿನ ಎ.ಪಿ.ಎಸ್. ವಾಣಿಜ್ಯ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಶ್ರೀರಾಮಕೃಷ್ಣರ ಜೀವನ-ಸಂದೇಶಗಳು ನಮ್ಮ ಮುಂದೆ ತೆರೆದಿಡುವ ಆಯಾಮಗಳು ಹಲವು. ಒಂದು ಕಡೆಯಿಂದ ಅವು ಕಾಲದೇಶಗಳಿಗೆ ಬದ್ಧವೆನಿಸಿದರೆ ಇನ್ನೊಂದು ಕಡೆಯಿಂದ ಅವು ಅವುಗಳಿಂದ ಮುಕ್ತವೂ ಹೌದು. ಒಂದು ದೃಷ್ಟಿಯಿಂದ ಆಕಾಶದ ಎತ್ತರದಲ್ಲಿ ವಿಹರಿಸುತ್ತಿದ್ದರೂ ಇನ್ನೊಂದು ದೃಷ್ಟಿಯಿಂದ ಈ ನೆಲದ ಆಳದಲ್ಲೇ ಬೇರುಬಿಟ್ಟಿರುವುದೂ ಉಂಟು. ಮೇಲ್ನೋಟಕ್ಕೆ ಈ ಎರಡೂ ಆಯಾಮಗಳನ್ನು ಲೌಕಿಕ ಹಾಗೂ ಅಲೌಕಿಕ ಆಯಾಮಗಳೆಂದು ವಿಶ್ಲೇಷಣೆಯ ದೃಷ್ಟಿಯಿಂದ ಗುರುತಿಸಿಕೊಳ್ಳಬಹುದು. ಶ್ರೀರಾಮಕೃಷ್ಣರಂಥವರ ಬದುಕನ್ನು ಗ್ರಹಿಕೆಯ ಅನುಕೂಲಕ್ಕಾಗಿ ಒಂದು ವ್ಯಾಕರಣ ಸೂತ್ರಕ್ಕೆ ಹೋಲಿಸಬಹುದು. ಪ್ರತಿಯೊಂದು ವ್ಯಾಕರಣ ಸೂತ್ರಕ್ಕೂ ತನ್ನದೇ ಆದ ನಿರ್ದಿಷ್ಟ ಸೂಚನೆ ಇರುತ್ತದೆ. ಈ ಅರ್ಥದಲ್ಲಿ ಅದೊಂದು ಮಂಡನೆಯ ಕ್ರಮ. ಆದರೆ ಅದನ್ನೊಂದು ಸಂದರ್ಭದ ಉತ್ಪನ್ನವೆಂದು ಪರಿಶೀಲಿಸಿದಾಗ ಅದೊಂದು ಪರಿಷ್ಕಾರವೂ ಆಗಿರುತ್ತದೆ. ತನಗಿಂತ ಹಿಂದಿನದನ್ನು, ತನ್ನ ಸಮಕಾಲೀನವಾದುದನ್ನು ತಿದ್ದುವ, ಸರಿಪಡಿಸುವ ಕೆಲಸವನ್ನು ಅದು ಮಾಡುತ್ತಿರುತ್ತದೆ. ಅದೊಂದು ಪ್ರತಿಕ್ರಿಯೆ ಎನ್ನುವುದೂ ನಿಜ. ಈ ದೃಷ್ಟಿಯಿಂದ ಶ್ರೀರಾಮಕೃಷ್ಣರ ಜೀವನವು ಇತಿಹಾಸದ ಸಂದರ್ಭದಲ್ಲಿ ನಮಗೊಂದು ಪಾಠವೂ ಹೌದು. ಇದರ ಸ್ಥೂಲ ವಿಶ್ಲೇಷಣೆ ಈ ಬರಹದ ವಸ್ತು.

ನಮ್ಮಲ್ಲಿ ಧಾರ್ಮಿಕ-ಪ್ರಾಪಂಚಿಕ, ಆಧ್ಯಾತ್ಮಿಕ-ಲೌಕಿಕ ಎಂಬೀ ಬಗೆಯ ವಿಂಗಡಣೆಗಳು ಲೋಕರೂಢಿಯಲ್ಲಿ ಬೇರುಬಿಟ್ಟಿವೆ. ಆಧ್ಯಾತ್ಮಿಕವಾದ ತಪಸ್ಸು-ಸಾಧನೆ-ಸಿದ್ಧಿಗಳನ್ನು ಅಸಾಮಾನ್ಯವೆಂದು ಕರೆದೇ ನಮಗೆ ಅಭ್ಯಾಸ. ಹಾಗಲ್ಲದವು ನಮಗೆ ಸಾಮಾನ್ಯತೆಯ ಗಡಿರೇಖೆಯೊಳಕ್ಕೆ ಬರುತ್ತವೆ. ಈ 'ಅಸಾಮಾನ್ಯತೆ' ಬೇರೊಂದು ರೀತಿಯಲ್ಲಿ ನಮಗೆ 'ಅನುಕೂಲ'ವಾಗುವುದೂ ಉಂಟು. 'ಅಸಾಮಾನ್ಯ'ರನ್ನು ಬೇರೊಂದು ಪರಿಧಿಗೆ ಸೇರಿಸಿಬಿಟ್ಟು, ಸಾಮಾನ್ಯರಾದ ನಮ್ಮಿಂದ ಏನು ತಾನೆ ಸಾಧ್ಯ ಎಂಬ ಬೇರೊಂದು ಬಗೆಯ ನೆಮ್ಮದಿಯ ನಿಷ್ಕೃತಿಗೂ ನಾವು ಶರಣಾಗುವುದುಂಟು. ಜೊತೆಗೆ ಈ ಅಸಾಮಾನ್ಯತೆಗೆ ಬೇರೊಂದು ಬಗೆಯ ವ್ಯಾವಹಾರಿಕವಾದ ಮುಖವೂ ಇದೆ. ತಮ್ಮನ್ನು ಇತರರು ಧಾರ್ಮಿಕ ಅಥವಾ ಆಧ್ಯಾತ್ಮಿಕ ವ್ಯಕ್ತಿಗಳೆಂದು ಗುರುತಿಸಬೇಕೆಂದು ಆಶಿಸುವವರು ತಮ್ಮದು ಒಂದು ಬಗೆಯ ಅಸಾಮಾನ್ಯತೆಯ ವ್ಯಕ್ತಿತ್ವ ಎಂದೇ ಬಿಂಬಿಸಿಕೊಳ್ಳುವುದುಂಟು. ಹೀಗಾಗಿ ಇವರ ನಡೆನುಡಿಗಳು, ವೇಷಭೂಷಣಗಳು, ಆಚಾರವಿಚಾರಗಳು ಇತರರಿಗಿಂತ ಅತಿ ಭಿನ್ನವಾಗಿ ಪ್ರತಿಷ್ಠಾಪಿತಗೊಳ್ಳುತ್ತವೆ. ಒಟ್ಟಿನಲ್ಲಿ ಅಸಾಮಾನ್ಯತೆಯನ್ನು

ವಿಶ್ಲೇಷಿಸುವುದೆಂದರೆ ಅದು ಅಷ್ಟು ಸುಲಭದ ಮಾತಲ್ಲ ಎಂಬ ನೆಲೆಗೆ ನಾವು ಬಂದು ತಲುಪುವಂತಾಗುತ್ತದೆ. ಈ ಹಿನ್ನೆಲೆಯಲ್ಲಿ ಶ್ರೀರಾಮಕೃಷ್ಣರ ಸಾಮಾನ್ಯತೆ – ಅಸಾಮಾನ್ಯತೆಗಳು ನಮಗೆ ಏನನ್ನು ತಿಳಿಸಬಲ್ಲವು ಎಂಬುದರ ಕಡೆಗೆ ಒಂದಿಷ್ಟು ದೃಷ್ಟಿಯನ್ನು ಹರಿಯಿಸಬಹುದು.

ಶ್ರೀರಾಮಕೃಷ್ಣರ ಜೀವನ ಎಷ್ಟು ಅಸಾಮಾನ್ಯವಾದುದು ಎಂಬುದನ್ನು ಇಂದು ಇತಿಹಾಸವೇ ನಮ್ಮ ಕಣ್ಣೆದುರಿಗೆ ಹಿಡಿದಿದೆ. "ಮೂವತ್ತು ಕೋಟಿ ಭಾರತೀಯರ ಎರಡು ಸಾವಿರ ವರ್ಷಗಳ ಆಧ್ಯಾತ್ಮಿಕ ಜೀವನದ ಪರಾಕಾಷ್ಠೆ ಶ್ರೀರಾಮಕೃಷ್ಣರು" ಎಂಬ ರೋಮಾರೋಲಾ ಅವರ ಮಾತಿಗಿಂತ ಹೆಚ್ಚಿನದೇನನ್ನೂ ನಾವು ಹೇಳಬೇಕಾಗಿಲ್ಲ. ಆದರೆ ಇಂತಹ ಶ್ರೀರಾಮಕೃಷ್ಣರು ಮೊದಲಿನಿಂದಲೂ ತಮ್ಮನ್ನು ಗುರುತಿಸಿಕೊಂಡಿದ್ದು ಸಾಮಾನ್ಯತೆಯ ಕಡೆಗೇ. ಅವರ ಪ್ರಕಾರ ಸಾಮಾನ್ಯತೆಯೆಂದರೆ ಸರಳತೆ ಮತ್ತು ಸರಳತೆ ಎಂದರೆ ಸಹಜತೆ. ಅಸಹಜವಾದ ಯಾವುದನ್ನೂ ಅವರ ಮನೋಧರ್ಮ ಸ್ವೀಕರಿಸುತ್ತಿರಲಿಲ್ಲ.

ಸಹಜಮಾನಸನಾಗದಿರೆ ನೀ
ಸಹಜಸುಂದರ ದೇವನೊಲುಮೆಯ
ಗಳಿಪುದೆಂತೀ ಲೋಕದಿ?

ಎಂಬ ಹಾಡೊಂದನ್ನು 'ವಚನವೇದ' ದಲ್ಲಿ ಕಾಣುತ್ತೇವೆ. ಸಾಮಾನ್ಯತೆಯೆಡೆಗಿನ ಅವರ ಒಲವನ್ನು ಬಾಲ್ಯದಿಂದಲೂ ಕಾಣುತ್ತೇವೆ. ಸರಳಸಾಮಾನ್ಯರೊಂದಿಗೆ ಒಡನಾಡುವುದೆಂದರೆ ಬಾಲಕ ಗದಾಧರನಿಗೆ ಅತ್ಯಂತ ಪ್ರಿಯ. ಪುರೋಹಿತರ ಅಸಾಮಾನ್ಯ ಶಾಸ್ತ್ರ ಪಾಂಡಿತ್ಯ ಆತನಿಗೆ 'ಅಕ್ಕಿ ಬಾಳೆಹಣ್ಣು ಗಂಟುಕಟ್ಟುವ' ಅಸಹಜ ಪ್ರವೃತ್ತಿಯಾಗಿ ಕಂಡುಬರುತ್ತದೆ. ಆತ ಕಮ್ಮಾರರ ಜಾತಿಯವಳಾದ ಧನಿಯಿಂದ ಮೊದಲ ಭಿಕ್ಷೆ ಸ್ವೀಕರಿಸಿದ ಸನ್ನಿವೇಶ ಕೂಡ ಈ ಮನೋಧರ್ಮದ ಒಂದು ರೂಪಕವಾಗಿ ನಿಲ್ಲುತ್ತದೆ.

ಶ್ರೀರಾಮಕೃಷ್ಣರ ಜೀವನದಲ್ಲಿ ಉದ್ದಕ್ಕೂ ಕಾಣುವ ಒಂದು ವೈಶಿಷ್ಟ್ಯವೆಂದರೆ ಸಹಜ ಮಾನುಷತೆಯನ್ನು ಅವರು ಅಭಿವ್ಯಕ್ತಿಗೊಳಿಸಿದ ರೀತಿ. ನಡೆನುಡಿಗಳಲ್ಲಾಗಲಿ, ಆಚಾರ ವಿಚಾರಗಳಲ್ಲಾಗಲಿ ಎಂತಹ ಸಾಮಾನ್ಯ–ಅತಿಸಾಮಾನ್ಯರಿಗೂ ಅವರು ಹೊರಗಿನವರಾಗಿ, ವಿಚಿತ್ರವರ್ತನೆಯವರಾಗಿ ಕಂಡುಬಂದಿರಲಿಲ್ಲ. ಇಷ್ಟರಮೇಲೆ ಅವರದು ನಿರಂತರವಾಗಿ ಸಮಾಧಿಯ ಭೂಮಿಕೆಯಲ್ಲಿ ವಿಹರಿಸುತ್ತಿದ್ದ ಚೇತನ! ಇನ್ನೊಂದು ರೀತಿಯಲ್ಲಿ ಹೇಳಬಹುದಾದರೆ, ಬಹುಶಃ ದೇವರು ಮಾತ್ರ ಇಷ್ಟು ಸಹಜ ಸರಳ ಮಾನವನಾಗಿ ಬದುಕಬಲ್ಲನೇನೋ ಎಂಬಂತೆ ಅವರು ಎಲ್ಲರೊಂದಿಗೆ ವ್ಯವಹರಿಸಿದರು. ಸಾಮಾಜಿಕವಾಗಿ, ಧಾರ್ಮಿಕವಾಗಿ ಉನ್ನತ ಸ್ತರಗಳಲ್ಲಿದ್ದು ಅಸಾಮಾನ್ಯರೆನಿಸಿಕೊಂಡವರೊಂದಿಗೆ ಒಡನಾಡುವಾಗಲೆಲ್ಲ ಅವರಲ್ಲಿ ಒಂದು ಬಗೆಯ ಶಿಶುಸಹಜ ಆಂತರಿಕ ಮನೋಧರ್ಮವನ್ನು ಗುರುತಿಸಬಹುದು. ಈ ಮೂಲಕವೂ ನಾವು ಪಡೆಯುವ ಸಂದೇಶ ಸ್ಪಷ್ಟವಾಗಿಯೇ ಇದೆ. ಶ್ರೀರಾಮಕೃಷ್ಣರಲ್ಲಿ ದೇವಭಾವ ಮತ್ತು ಮಾನುಷಭಾವಗಳ ಅಪೂರ್ವ ಸಂಗಮದ ಬಗ್ಗೆ ಸ್ವಾಮಿ ಶಾರದಾನಂದರು ತಮ್ಮ 'ಶ್ರೀರಾಮಕೃಷ್ಣ ಲೀಲಾಪ್ರಸಂಗ'ದಲ್ಲಿ ಹೀಗೆ ಬರೆಯುತ್ತಾರೆ:

"ಶ್ರೀರಾಮಕೃಷ್ಣರ ಜೀವನವನ್ನು ಅಧ್ಯಯನ ಮಾಡಿದಷ್ಟೂ ಅವರಲ್ಲಿ ನಮಗೆ ಕಂಡುಬರುವ ಒಂದು ಮೋಹಕ ಲಕ್ಷಣವೆಂದರೆ ದೇವ–ಮಾನವ ಭಾವಗಳೆರಡರ ಅಪೂರ್ವ ಸಂಗಮ. ಇವೆರಡರ ಮಧುರ ಸಾಮಂಜಸ್ಯ ಒಂದೇ ನೆಲೆಯಲ್ಲಿ ಸಾಧ್ಯ ಎಂಬುದು ಅವರನ್ನು ನೋಡದಿದ್ದರೆ ನಮಗೆ ತಿಳಿಯುತ್ತಿರಲಿಲ್ಲ. ಪೂರ್ಣ ದೇವತ್ವ ಮತ್ತು ದಿವ್ಯಶಕ್ತಿ – ಇವು ಮಾನವೀಯ ಆವರಣದ ಮೂಲಕ ಪ್ರಕಾಶಿತವಾದರೆ ಏನಾಗುವುದೋ ಅದೇ ಶ್ರೀರಾಮಕೃಷ್ಣರು. ಇವೆರಡರಲ್ಲಿ ಯಾವುದೂ ಅವರಲ್ಲಿ ಕೇವಲ ತೋರಿಕೆಯದಾಗಿರಲಿಲ್ಲ. ಅವರು ಮಾನವಕಲ್ಯಾಣಕ್ಕಾಗಿಯೇ ಮಾನವಭಾವವನ್ನು ಯಥಾರ್ಥವಾಗಿಯೇ ಸ್ವೀಕರಿಸಿದ್ದರು. ಇದರ ಮೂಲಕ ದೇವತ್ವಕ್ಕೆ ಏರುವುದು ಹೇಗೆಂಬುದನ್ನು ತೋರಿಸಿದರು." (*ಶ್ರೀರಾಮಕೃಷ್ಣ ಲೀಲಾಪ್ರಸಂಗ*, ಭಾಗ ೧, ಪುಟ ೯೫.)

ಶ್ರೀರಾಮಕೃಷ್ಣರ ಮಾನುಷ ಅಭಿವ್ಯಕ್ತಿಯೊಂದೇ ನಮಗೆ ಹಲವು ನೆಲೆಗಳಲ್ಲಿ ವಿಶ್ಲೇಷಣೆಗೆ ವಸ್ತುವನ್ನು ಒದಗಿಸುತ್ತದೆ. ಇಂಗ್ಲಿಷ್ ವಿದ್ಯಾಭ್ಯಾಸದ ಪರಿಣಾಮವಾಗಿ ಸಾಮಾನ್ಯರೆಲ್ಲರೂ – ಕೃತಕವಾಗಿಯಾದರೂ ಸರಿ – ಅಸಾಮಾನ್ಯರಾಗಲು ಹಾತೊರೆಯುತ್ತಿದ್ದ ಸನ್ನಿವೇಶ ಅದು. ಇಂತಹ ಸಂದರ್ಭದಲ್ಲಿ ಶ್ರೀರಾಮಕೃಷ್ಣರು ಕಲ್ಕತ್ತದ ನಿವಾಸಿಗಳಾಗಿದ್ದರೂ ತಮ್ಮ ಗ್ರಾಮ್ಯತೆಯನ್ನು ಬಿಟ್ಟುಕೊಡಲಿಲ್ಲ. ಅಷ್ಟೇ ಅಲ್ಲ, ಮಾತುಕತೆಗಳಲ್ಲಿ, ವೇಷಭೂಷಣಗಳಲ್ಲಿ ಇಂಗ್ಲಿಷರನ್ನು ಅನುಕರಿಸುತ್ತಿದ್ದ 'ಬಾಬು'ಗಳನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿದರು. ಅಲ್ಲದೆ ಇದರ ಮುಂದುವರಿಕೆಯಾಗಿ ಇನ್ನೊಂದು ಸಂಗತಿಯನ್ನು ಕೂಡ ಪರಿಶೀಲನೆಗೆ ತೆಗೆದುಕೊಳ್ಳಬಹುದು. ತಮ್ಮ ಸಮಕಾಲೀನ ಸಂದರ್ಭದಲ್ಲಿ ಸ್ಥಾಪಿತವಾಗಿದ್ದ ಬಹು ದೊಡ್ಡ ಜ್ಞಾನಪ್ರಪಂಚವನ್ನು ಶ್ರೀರಾಮಕೃಷ್ಣರು ಎದುರಾದದ್ದು ಕೂಡ ತಮ್ಮ ಸಾಮಾನ್ಯತೆಯ ಮೂಲಕವೇ. ಕೇಶವಚಂದ್ರ ಸೇನ, ಈಶ್ವರಚಂದ್ರ ವಿದ್ಯಾಸಾಗರ, ಬಂಕಿಮಚಂದ್ರ, ಪ್ರತಾಪಚಂದ್ರ ಮಜುಂದಾರ ಮೊದಲಾದವರು ತಮ್ಮ ಜ್ಞಾನಕ್ಕಾಗಿಯೇ, ಸಂಘಟನಾ ಕೌಶಲಕ್ಕಾಗಿಯೇ ಅಂದಿನ ಸಮಾಜದಲ್ಲಿ ಬಹುದೊಡ್ಡ ಹೆಸರು ಮಾಡಿದ್ದವರು. ಅವರಿಗೆ ಹೋಲಿಸಿದರೆ 'ವ್ಯಾವಹಾರಿಕ' ನೆಲೆಯಲ್ಲಿ ಕೂಡ ಶ್ರೀರಾಮಕೃಷ್ಣರು ಅತ್ಯಂತ ಸಾಮಾನ್ಯರು. ಆದರೆ ಅವರೆಲ್ಲರನ್ನೂ ತಿದ್ದಿದವರು, ಪರಿಷ್ಕರಿಸಿದವರು ಶ್ರೀರಾಮಕೃಷ್ಣರು ಎಂಬುದನ್ನು ಇತಿಹಾಸ ದಾಖಲಿಸಿದೆ. ಆ ಮೂಲಕ ಶ್ರೀರಾಮಕೃಷ್ಣರು ಸಾಮಾನ್ಯತೆಯನ್ನು ಒಂದು ಯುಗಧರ್ಮವೆಂಬಂತೆ ನಮ್ಮ ಮುಂದಿರಿಸಿಹೋಗಿದ್ದಾರೆ. ಇಂಗ್ಲಿಷ್–ಸಂಸ್ಕೃತಗಳನ್ನರಿಯದ ಗ್ರಾಮೀಣ ಬಂಗಾಳಿಯೊಬ್ಬನು ಅವತಾರವರಿಷ್ಠನಾಗಿ ಪ್ರತಿಷ್ಠಾಪಿತವಾದುದನ್ನು ಈ ಕಾಲದ ಒಂದು ದೊಡ್ಡ ರೂಪಕವಾಗಿ ಸ್ವೀಕರಿಸಬಹುದು. ಇದನ್ನು ಇನ್ನೊಂದು ನೆಲೆಯಿಂದಲೂ ಪರಿಶೀಲಿಸಲು ಸಾಧ್ಯವಿದೆ. ಒಂದು ದೃಷ್ಟಿಯಿಂದ ಮಹೇಂದ್ರನಾಥ – ನರೇಂದ್ರನಾಥ ಇಬ್ಬರೂ ಆ ಕಾಲದ ಜ್ಞಾನಪ್ರಪಂಚದ ಎರಡು ವಿಭಿನ್ನ ಮಾದರಿಗಳೆನ್ನಬಹುದು. ಈ ಎರಡು ಮಾದರಿಗಳಿಗೂ ವೈಸಾದೃಶ್ಯವನ್ನು ಒದಗಿಸಿದ್ದು ಶ್ರೀರಾಮಕೃಷ್ಣರ ಸಾಮಾನ್ಯತೆ.

ಮಹೇಂದ್ರನಾಥನು ಶ್ರೀರಾಮಕೃಷ್ಣರನ್ನು ಎದುರಿಸಿದ್ದೇ ತರ್ಕದ ನೆಲೆಯಿಂದ. ಜ್ಞಾನದಲ್ಲಿ ಒಂದು ಸಂಗತಿ ಸತ್ಯವಾದರೆ ಅದರ ವಿರುದ್ಧವಾದುದು ಅಸತ್ಯವಾಗಿರಬೇಕು ಎನ್ನುವುದು ಆತನ –

ಹಾಗೂ ಆತನಂತಹ ಎಲ್ಲ ಆಧುನಿಕ ತಿಳಿವಳಿಕೆಯುಳ್ಳವರ – ಜ್ಞಾನಸೌಧದ ಮೂಲಾಧಾರ. ಅಸಾಮಾನ್ಯರು ಸಾಮಾನ್ಯರಾದವರಿಗೆ ತಿಳಿವಳಿಕೆಯನ್ನು ನೀಡುವ ಜವಾಬ್ದಾರಿಯನ್ನು ಹೊರಬೇಕು ಎನ್ನುವುದು ಕೂಡ ಆತನ ಗ್ರಹಿಕೆಯಾಗಿತ್ತು. ಅವನೇ ಹೇಳಿಕೊಳ್ಳುವಂತೆ ಅವನ ಈ ಎರಡೂ ಗ್ರಹಿಕೆಗಳನ್ನು ಶ್ರೀರಾಮಕೃಷ್ಣರು ಒಂದೇ ಸಲಕ್ಕೆ ನುಚ್ಚುನೂರು ಮಾಡಿದರು. ಇನ್ನು ನರೇಂದ್ರನಾಥನ ವಿಷಯಕ್ಕೆ ಬರುವುದಾದರೆ ಆತನದು ದಣಿವರಿಯದ ಅನ್ವೇಷಣೆಯ ಪ್ರವೃತ್ತಿ. ಇದು ತನ್ನ ನಿಲುಗಡೆಯನ್ನು ಕಂಡುಕೊಂಡದ್ದು ಆಧುನಿಕ ವಿಶ್ವವಿದ್ಯಾಲಯಗಳ ಸಂಶೋಧನ ಕೇಂದ್ರಗಳಲ್ಲೋ ಪ್ರಯೋಗಶಾಲೆಗಳಲ್ಲೋ ಅಲ್ಲ. ಬದಲಾಗಿ ಬಾಲ್ಯದಲ್ಲೇ ಶಾಲೆಯಿಂದ ಹೊರಬಿದ್ದ ದಕ್ಷಿಣೇಶ್ವರದ ಸಾಮಾನ್ಯ ಅರ್ಚಕನ ಸಣ್ಣ ಕೊಠಡಿಯೊಂದರಲ್ಲಿ. ಜ್ಞಾನವನ್ನು ಸಾಂಸ್ಥಿಕ ಪಟ್ಟಣಗಳಲ್ಲಿ ಪ್ರತಿಷ್ಠಾಪಿಸುವುದರ ನಿರಾಕರಣೆಯನ್ನು ಶ್ರೀರಾಮಕೃಷ್ಣರ ಜೀವನದಲ್ಲಿ ಸ್ಪಷ್ಟವಾಗಿ ಕಾಣಬಹುದು.

ಜನಸಾಮಾನ್ಯರನ್ನು ಕಡೆಗಣಿಸಿದ್ದು ನಮ್ಮ ರಾಷ್ಟ್ರೀಯ ಪಾಪಗಳಲ್ಲೊಂದು ಎಂದರು ಸ್ವಾಮಿ ವಿವೇಕಾನಂದರು. ಸಾಮಾನ್ಯರನ್ನು ಕೇಂದ್ರಸ್ಥಾನದಲ್ಲಿ ಇರಿಸಿಕೊಂಡದ್ದು ರಾಮಕೃಷ್ಣ–ವಿವೇಕಾನಂದ ತಾತ್ತ್ವಿಕತೆಯ ಪ್ರಮುಖ ಲಕ್ಷಣಗಳಲ್ಲೊಂದು. ಶ್ರೀರಾಮಕೃಷ್ಣರಾದರೋ ಅಕ್ಷರಶಃ ದೀನರ, ದರಿದ್ರರ ಸಾಲಿನಲ್ಲಿ ಹೋಗಿ ಕುಳಿತುಬಿಟ್ಟವರು; 'ದರಿದ್ರದೇವೋ ಭವ' ಎಂಬ ಹೊಸ ಮಂತ್ರವನ್ನು ಸ್ವಾಮಿ ವಿವೇಕಾನಂದರ ಮೂಲಕ ನೀಡಿದವರು. ಆಧುನಿಕ ಸಂದರ್ಭದಲ್ಲಿ ಧರ್ಮ–ಅಧ್ಯಾತ್ಮಗಳಿಗೆ ಸಾಮಾನ್ಯತೆಯ ಸ್ಪರ್ಶ ಬಂದದ್ದು ಹೀಗೆ.

ಹಿಂದೆಯೇ ಹೇಳಿದಂತೆ ಶ್ರೀರಾಮಕೃಷ್ಣರ ಜೀವನವೆಂಬುದೇ ಒಂದು ಬಗೆಯ ವಿಶಿಷ್ಟ ಭಾಷೆ. ಅದು ಅತ್ಯಂತ ಸಹಜ ಮತ್ತು ಸರಳ. ಅದರಲ್ಲಿ ಆಲಂಕಾರಿಕ ಉಕ್ತಿಗಳಿಲ್ಲ; ಅದು ಪ್ರದರ್ಶನದ ವಸ್ತುವಾಗುವುದಿಲ್ಲ; ಅಲ್ಲಿ ಜೋರುದನಿಯಿಲ್ಲ; ವಾಗ್ಮಿತೆಯಿಂದ ವಾದಪ್ರತಿವಾದಗಳಿಗೆ ಎಡೆಮಾಡಿಕೊಡುವುದಿಲ್ಲ. ಬದಲಾಗಿ ಪ್ರೀತಿಯ ಸಲ್ಲಾಪದಲ್ಲಿ ಎಲ್ಲರನ್ನೂ ಜೊತೆಗೂಡಿಸುತ್ತದೆ; ತನ್ನೊಂದಿಗೆ ಕರೆದೊಯ್ಯುತ್ತದೆ.

ಶ್ರೀರಾಮಕೃಷ್ಣರ ಸುತ್ತ ಸೇರಿದ ಭಕ್ತಸಮುದಾಯವನ್ನು, ಈ ಸಮುದಾಯದೊಂದಿಗೆ ಶ್ರೀರಾಮಕೃಷ್ಣರು ಹೊಂದಿದ್ದ ಸಂಬಂಧದ ಸ್ವರೂಪದ ಹಿನ್ನೆಲೆಯಲ್ಲಿ ಒಂದಿಷ್ಟು ಗಮನಿಸಬಹುದು. ಹಾಗೆ ನೋಡಿದರೆ ಅವರೆಲ್ಲರನ್ನೂ 'ಭಕ್ತರು' ಎಂದು ನಿರ್ದೇಶಿಸುವುದೂ ಕಷ್ಟವೆ. ಆದರೆ ಒಂದಂತೂ ನಿಜ. ಅವರೆಲ್ಲ ನಾನಾ ವರ್ಗ ವರ್ಣ ಅಂತಸ್ತುಗಳಿಗೆ ಸೇರಿದವರಾಗಿದ್ದರೂ ಒಂದೋ ಅತ್ಯಂತ ಸಾಧಾರಣ ವ್ಯಕ್ತಿಗಳಾಗಿದ್ದರು ಇಲ್ಲವೇ ತಮ್ಮ 'ವಿಶಿಷ್ಟತೆ'ಯನ್ನು ಬದಿಗೊತ್ತಿ ಸಾಧಾರಣರೊಂದಿಗೆ ಸಾಧಾರಣರಾಗಿ ಬೆರೆಯಬಲ್ಲ ಮನೋಧರ್ಮದವರಾಗಿದ್ದರು. ಇನ್ನು ಶ್ರೀರಾಮಕೃಷ್ಣರಂತೂ ತಮ್ಮ ಭಕ್ತಸಮುದಾಯದ ನಡುವೆ ಎಂದೂ ಪೀಠಸ್ಥರಾಗಲಿಲ್ಲ. ಇತರರು ಬಂದು ಅವರನ್ನು ಕಂಡು ಮಾತನಾಡುವ ಸಂಬಂಧವಾಗಿ ಯಾವ ವಿಧಿನಿಷೇಧಗಳೂ ಇರಲಿಲ್ಲ. ಅಷ್ಟೇಕೆ, ಯಾರನ್ನಾದರೂ ಕಾಣಬೇಕೆಂದರೆ ಸ್ವತಃ ಶ್ರೀರಾಮಕೃಷ್ಣರೇ ಯಾವ ಉಪಚಾರಕ್ಕೂ ಕಾಯದೆ ತಾವೇ ಗಾಡಿ ಮಾಡಿಕೊಂಡು ಹೋಗುತ್ತಿದ್ದ ಉದಾಹರಣೆಗಳೇ ಹೆಚ್ಚು.

ಇನ್ನು ನಮಸ್ಕಾರದ ವಿಷಯದಲ್ಲಿಯೂ ಅಷ್ಟೆ. ಮೊದಲು ನಮಸ್ಕರಿಸುವುದೇ ಅವರ ಪದ್ಧತಿ. ಅಷ್ಟೇ ಅಲ್ಲ, ಕೆಲವೊಮ್ಮೆ ಈ ನಮಸ್ಕಾರ ಪ್ರತಿನಮಸ್ಕಾರಗಳ ಸರಣಿಗೆ ಅಂತ್ಯವೇ ಇರುತ್ತಿರಲಿಲ್ಲ. "ಅವರು ತಮ್ಮ ನಮಸ್ಕಾರಾಸ್ತ್ರದಿಂದಲೇ ನಮ್ಮೆಲ್ಲರನ್ನೂ ಗೆದ್ದರು" ಎಂದಿದ್ದಾನೆ ಗಿರೀಶ್‌ಚಂದ್ರ ಘೋಷ್. ಮಾನವತೆಯ ಮಾಧುರ್ಯಕ್ಕೆ ಇದಕ್ಕಿಂತ ಉತ್ತಮವಾದ ನಿದರ್ಶನಗಳನ್ನು ಇನ್ನೆಲ್ಲಿಂದ ಹುಡುಕಿ ತರೋಣ?

ಶ್ರೀರಾಮಕೃಷ್ಣರ ಜೀವನದ ಇನ್ನೊಂದು ವಿಶೇಷ ಆಯಾಮದ ಕಡೆಗೆ ನಾವು ಗಮನವನ್ನು ಹರಿಯಿಸಬೇಕು. ಅವರು ತಮ್ಮ ಅಸಾಮಾನ್ಯ ಸಾಧನೆಗಳ ಮೂಲಕ ಅಸಾಮಾನ್ಯ ಸಿದ್ಧಿಯ ಶಿಖರಗಳಲ್ಲಿ ವಿಹರಿಸಿದರು. ಸಮಾಧಿಗೇರುವುದೆಂದರೆ ಅವರಿಗೆ ಉಸಿರಾಟದಷ್ಟೇ ಸಹಜವಾಗಿತ್ತು. ಅವರು ಬಲವಂತವಾಗಿ ತಮ್ಮ ಮನಸ್ಸನ್ನು ಲೌಕಿಕಸ್ತರಕ್ಕೆ ಎಳೆದು ತರಬೇಕಾಗುತ್ತಿತ್ತು. ಹೀಗಿದ್ದರೂ ಲೋಕದ ಜನರೊಂದಿಗೆ ಸಂಪರ್ಕವನ್ನು ಸಾಧಿಸಲು ಅವರು ಆರಿಸಿಕೊಂಡ ದಾರಿ ಮಾತ್ರ ಸಾಮಾನ್ಯ ಜನತೆಯದು. ಅವರು ಸಂಸ್ಕೃತವನ್ನು ಕಲಿತು ಶಾಸ್ತ್ರಪಾಂಡಿತ್ಯವನ್ನು ಸಂಪಾದಿಸಲಿಲ್ಲ; ವೇದೋಪನಿಷತ್ತುಗಳನ್ನು ಉದಾಹರಿಸಿ ಪೀಠದ ಮೇಲೆ ಕುಳಿತು ಉಪನ್ಯಾಸಗಳನ್ನು ಮಾಡಲಿಲ್ಲ. ತಮ್ಮನ್ನು ಭೇಟಿಯಾದವರೊಂದಿಗೆ, ತಾವು ಭೇಟಿಯಾದವರೊಂದಿಗೆ, ದಿನನಿತ್ಯದ ಸಂಭಾಷಣೆಯ ಸಂದರ್ಭದಲ್ಲಿ ತಮ್ಮ ವಿಚಾರಗಳನ್ನು ಹಂಚಿಕೊಂಡರು. ಸಂವಾದ ಎನ್ನುವುದೇ ಸಾಮಾನ್ಯತೆಯ ಪರಿಭಾಷೆ. ಏಕೆಂದರೆ ಪಂಡಿತ ಮಂಡಳಿಯಲ್ಲಿ ಸಾಮಾನ್ಯರು ಬಾಯಿಬಿಡುವಂತಿಲ್ಲ; ಅಲ್ಲಿ ಕಿವಿಗಳನ್ನು ಮಾತ್ರ ತೆರೆದಿಡಲು ಅವಕಾಶವಿದೆ. ಆದರೆ ಇಲ್ಲಿ ಹಾಗಲ್ಲ. ಪ್ರತಿಯೊಬ್ಬರಿಗೂ ಇಲ್ಲಿ ಪ್ರವೇಶದ ಅವಕಾಶವಿದೆ. ತಮ್ಮ ಸಂದೇಹಗಳನ್ನು ತೆರೆದಿಡಬಹುದು.

ಈ ದೃಷ್ಟಿಯಿಂದ ಶ್ರೀರಾಮಕೃಷ್ಣರ 'ಕಥಾಮೃತ' ಕ್ಕೆ ಸಮಕಾಲೀನ ಸಂದರ್ಭದಲ್ಲಿ ಒಂದು ರೂಪಕಾತ್ಮಕವಾದ ಸ್ವರೂಪವಿದೆ. ಇತರ ಧರ್ಮಗ್ರಂಥಗಳು ಅಂದು–ಆಗ ನಿರ್ಮಾಣಗೊಂಡಿದ್ದು, ಅವುಗಳ ಕಾಲದೇಶಗಳೂ ಬೇರೆಬೇರೆಯೇ. ಅವುಗಳಿಗೆ ಹೆಚ್ಚೆಂದರೆ ನಾವು ಓದುಗರಾಗಬಲ್ಲೆವು. ಅವುಗಳದು ಸಂವೃತ ಮಾದರಿಯ ರಚನೆ (Closed Structure). ಆದರೆ ಕಥಾಮೃತ ಹೀಗಲ್ಲ. ಅದು ಇಂದು – ಈಗ ಸಂಭವಿಸುತ್ತಿರುವಂತಿದೆ. ಅಲ್ಲದೆ ಅಲ್ಲಿ ನಮಗೆ ಎದುರಾಗುವುದು ನಮ್ಮ ದಿನನಿತ್ಯದ ಪರಿಚಿತ ಜಗತ್ತಿನ ಇನ್ನೊಂದು ವಿಸ್ತರಣೆಯೇ ಹೊರತು ಅಲ್ಲಿ ಯಾವುದೂ ನಮಗೆ ಆಗಂತುಕವಲ್ಲ. ಅಲ್ಲಿ ಎಲ್ಲವೂ, ಎಲ್ಲರೂ ನಮ್ಮನ್ನು ಸ್ವಾಗತಿಸಿ ಒಳಗೆ ಕರೆದುಕೊಳ್ಳುವುದಕ್ಕೆ ಅವಕಾಶವಿದೆ. ಇಲ್ಲಿ ನಾವು ಓದುಗರಾಗುವುದಿಲ್ಲ, ಪಾಲುದಾರರಾಗುತ್ತೇವೆ.

ಅಭಿವ್ಯಕ್ತಿಯ ದೃಷ್ಟಿಯಿಂದ ಕಥಾಮೃತದ ವಿನ್ಯಾಸವೇ ಭಾಗವಹಿಸುವಿಕೆಯನ್ನು ಆಹ್ವಾನಿಸುವಂಥದು. ಇಷ್ಟಲ್ಲದೆ ಅದು ನಮ್ಮಂತೆಯೇ ಇಲ್ಲಿ ಬದುಕಿಬಾಳಿದ ವ್ಯಕ್ತಿಯೊಬ್ಬನ ದಿನಚರಿಯಾಗಿರುವುದರಿಂದ ಇಲ್ಲಿ ಯಾವುದೂ ಅಮೂರ್ತವಲ್ಲ. ದಿನಾಂಕ–ತಿಂಗಳು–ವರ್ಷ–ಮಾಸ–ತಿಥಿ–ಸ್ಥಳ–ಸಮಯ ಎಲ್ಲವೂ

ಇಲ್ಲಿ ಕರಾರುವಾಕ್ಕಾಗಿ ದಾಖಲಾಗಿವೆ. ಶ್ರೀರಾಮಕೃಷ್ಣರಂತಹ ಅವತಾರವೊಂದು ಬಹುಶಃ ಈ ಬಗೆಯಲ್ಲಿ ಮಾತ್ರವೇ ಮಾನವೀಯವಾಗಲು ಸಾಧ್ಯ ಮತ್ತು ಮಾನವೀಯವಾಗುವುದೆಂದರೆ ಸಾಮಾನ್ಯತಾಸ್ವರೂಪವನ್ನು ಧರಿಸುವುದು ಎಂಬುದನ್ನು ಬೇರೆ ಬಿಡಿಸಿ ಹೇಳಬೇಕಾಗಿಲ್ಲ.

ಇನ್ನು ಶ್ರೀರಾಮಕೃಷ್ಣರ ಉಪದೇಶಗಳ ಸ್ವರೂಪದ ಬಗೆಗಂತೂ ಹೆಚ್ಚು ಹೇಳಬೇಕಾಗಿಯೇ ಇಲ್ಲ. ಅದೊಂದು ಅತ್ಯದ್ಭುತವಾದ ಸಾಮಾನ್ಯತಾ ಪ್ರಪಂಚ. ದೈನಂದಿನ ಅತ್ಯಂತ ಸಾಧಾರಣ ಸಂಗತಿಗಳು ಯಾವುದೇ ಕೃತಕತೆಯ ಸೋಂಕಿಲ್ಲದೆ ಇಲ್ಲಿ ಅತ್ಯದ್ಭುತವಾದ ತತ್ತ್ವಗಳ ದರ್ಶನವನ್ನು ಮಾಡಿಸುತ್ತವೆ. ಇಲ್ಲಿನ ಉಪಮೆಗಳು, ದೃಷ್ಟಾಂತಗಳು, ಕಥಾನಕಗಳು ಎಲ್ಲವೂ ಈ ಲೋಕದ – ಇನ್ನಷ್ಟು ನಿರ್ದಿಷ್ಟಗೊಳಿಸುವುದಾದರೆ ಇಲ್ಲಿನ ಗ್ರಾಮ್ಯಜಗತ್ತಿನ – ವಿವರಗಳಿಂದ ಇಡಿಕಿರಿದಿವೆ. ಶ್ರೀರಾಮಕೃಷ್ಣರಂತಹ 'ಅಸಾಧಾರಣ' ಸಾಮಾನ್ಯತಾಮೂರ್ತಿಗಳು ಮಾತ್ರ ಬಹುಶಃ ಈ ಬಗೆಯ ಜಗತ್ತೊಂದನ್ನು ಕಟ್ಟಬಲ್ಲರೇನೊ.

ಇಂದಿನ ಸಮಕಾಲೀನ ಸಂದರ್ಭದಲ್ಲಿ ಶ್ರೀರಾಮಕೃಷ್ಣರ ಸಾಮಾನ್ಯತಾಪ್ರತಿಭೆ ನಮ್ಮ ಮುಂದೆ ತೆರೆಯುವ ಸಂದೇಶದ ಸ್ತರಗಳು ಹಲವು. ಹೇಳಿಕೇಳಿ ನಮ್ಮದು ಮಾಧ್ಯಮಗಳ ಯುಗ. ಸುದ್ದಿಯಿರಲಿ, ರಂಜನೆಯಿರಲಿ ಎಲ್ಲವನ್ನೂ ಬೃಹತೀಕರಿಸುವುದು ಅವುಗಳ ಸ್ವಭಾವ. ಈ ಭರಾಟೆಯಲ್ಲಿ ಮೌನ–ಶಾಂತಿಗಳ ನೆಲೆಯಲ್ಲಿ ಮಾತ್ರವೇ ಅನುಸಂಧಾನಕ್ಕೆ ಸಿಲುಕುವ ಸತ್ಯದ ಸಹಜ–ಸರಳ ವಾಸ್ತವತೆ ಎಲ್ಲೋ ಕಳೆದುಹೋಗುತ್ತದೆ.

ಇನ್ನೊಂದು ನೆಲೆಯಿಂದ ನೋಡುವುದಾದರೆ ಮಾಧ್ಯಮಗಳನ್ನು ಉಪಕರಣವನ್ನಾಗಿ ಬಳಸಿಕೊಂಡು ಅಂತೂ ಇಂತೂ ಸುದ್ದಿ ಮಾಡುವುದು, ಪ್ರಸಿದ್ಧಿಯನ್ನು ಪಡೆಯುವುದು ಈ ಯುಗದ ಪರಮಾದರಣವೇನೋ ಎಂಬಂತೆ ಕಂಡುಬರುತ್ತಿದೆ. ಈ ಗದ್ದಲದಲ್ಲಿ ಆಸ್ತಿ–ಸಂಪತ್ತು–ಹಣ–ಅಧಿಕಾರ ಇವುಗಳ ಯಾವ ಬೆಂಬಲವೂ ಇಲ್ಲದ ಸಾಮಾನ್ಯನನ್ನು ಯಾರು ತಾನೇ ಕೇಳಬೇಕು? ವಿಪರ್ಯಾಸವೆಂದರೆ ನಮ್ಮ ಪ್ರಜಾಸತ್ತೆಯ ಮೂಲಾಧಾರ ಸಾಮಾನ್ಯನಾದರೂ ಸಮಾಜದ ಜೀವನಾಡಿಗಳೆಂದು ಬಿಂಬಿತರಾಗುತ್ತಿರುವವರು ಸುದ್ದಿಜೀವಿಗಳಿಂದ 'ಅಸಾಮಾನ್ಯ'ರೆಂದು ಪ್ರಕಾಶಕ್ಕೆ ಬರುವವರು.

ಆದರೆ ಶ್ರೀರಾಮಕೃಷ್ಣರ ಸಾಮಾನ್ಯತೆಯ ಆದರ್ಶ ಇಂದಾದರೂ ನಮ್ಮ ಕಣ್ತೆರೆಸಬೇಕು. ಅವರು ಎಂದಿಗೂ ಸುದ್ದಿಯಾಗಲು ಬಯಸಿದವರಲ್ಲ; ಕೀರ್ತಿಗಾಗಿ ಹಂಬಲಿಸಿದವರಲ್ಲ. ಅಣಿಮಾದಿ ಅಷ್ಟಸಿದ್ಧಿಗಳನ್ನು ಕಸದಂತೆ ಕಂಡವರು. ಕವಿ ಕುವೆಂಪು **'ಶ್ರೀಸಾಮಾನ್ಯನೆ ಭಗವದ್‌ಮಾನ್ಯಂ!'** ಎಂದು ಉದ್ಗರಿಸಿರುವುದರ ಹಿನ್ನೆಲೆಯಲ್ಲಿಯೂ ಈ ಆದರ್ಶವಿರುವುದನ್ನು ಗಮನಿಸಬೇಕು. ಭಕ್ತರ ಸಮಾರಾಧನೆಯಲ್ಲಿ ಪ್ರಧಾನಪಂಕ್ತಿಯನ್ನು ನಿರೀಕ್ಷಿಸುವ ಮಾತಂತಿರಲಿ, ಧೂಳು ತುಂಬಿದ ಮೂಲೆಯೊಂದರಲ್ಲಿ ಕುಳಿತು, ಬಡಿಸಿದ್ದನ್ನು ಗೊಣಗದೆ ಊಟಮಾಡಿ ಬರುತ್ತಿದ್ದ ಇಂತಹ ಮಹಾತ್ಮನನ್ನು ಇನ್ನೆಲ್ಲಿ ಕಾಣಲು ಸಾಧ್ಯ? ಸಾಮಾನ್ಯರಿಗಾಗಿ ಸಾಮಾನ್ಯನಾಗಿ ಬಾಳಿದ ಈ ವ್ಯಕ್ತಿ ನಮ್ಮ ಸರ್ವೋದಯದ ಆದರ್ಶಕ್ಕೆ ಸ್ಫೂರ್ತಿಯನ್ನು ನೀಡದಿದ್ದರೆ ಬಹುಶಃ ಮತ್ತಾರು ತಾನೇ ನೀಡಿಯಾರು?

ಸ್ವಾಮಿ ಜಗದಾತ್ಮಾನಂದರ 'ಬದುಕಲು ಕಲಿಯಿರಿ' ಗ್ರಂಥವನ್ನು ಓದಿದಾಗ

ಗ್ರಂಥವಲ್ಲವಿದು ಚೊಕ್ಕ ರತ್ನವಿದು ಬದುಕ ಕಲಿಯಿರೆಂಬ
ಹೃದಯ ಮೆದುಳಿನಲಿ ಹಬ್ಬಿ ತಬ್ಬಿರುವ ತಮಕೆ ಸೂರ್ಯಬಿಂಬ
ಆ ವಿವೇಕಮುನಿ ವಾಣಿಯಿಲ್ಲದೆಯೊ ಪಂಕ್ತಿಪಂಕ್ತಿಯಲ್ಲಿ
ಭಾನುಸದೃಶ ಮುನಿ ಮುಂದುವರಿದಿಹನು 'ಜಗದ ಆತ್ಮರಲ್ಲಿ' [೧]

ಇದನು ಓದಿ ವಿಜ್ಞಾನಕಾಯ್ತು ಬಲು ಅದರ ಅಲ್ಪಜ್ಞಾನ
ಸರ್ವಕುಮನಗಳು ಸುಮನವಾಗುತಿವೆ ಸ್ವಾರ್ಥಕಿಲ್ಲ ಸ್ಥಾನ
ದುಷ್ಟರಾಷ್ಟ್ರರಿಗೆ ಮಾರ್ಗಭ್ರಷ್ಟರಿಗೆ ಶಿಷ್ಟ ಮಾರ್ಗವಿಲ್ಲಿ
ಸುಪ್ತವ್ಯಾಘ್ರಗಳು ತಪ್ತವಾಗುತಿವೆ ವೀರವಾಕ್ಯದಲ್ಲಿ [೨]

ವೀರಭಾವಗಳ ಮಾತೆ ಲೇಖನಿಯು ಲೇಖ ರಾಷ್ಟ್ರಶಕ್ತಿ
ಮನದೊಳಲ್ಲದಲೆ ಮೆದುಳಿನಲ್ಲಿ ಸಹ ಉರಿಯನೆಬಿಪಯುಕ್ತಿ
ಧೀರ ದಿನಕರರ ವೀರವಾಣಿಗೀ ಸಾಕ್ಷಿ ತಮ್ಮ ಗ್ರಂಥ
ಪಂಥ ಕಾಣದಿಹ ಯುವತಿ ಯುವಕರಿಗೆ ಇದುವೆ ದಿವ್ಯಪಂಥ [೩]

ಶಬ್ದವಲ್ಲವಿವು ಗಗನವಜ್ರಗಳು ಅವಕೆ ಇಲ್ಲ ಜಂಬ
ವಾಕ್ಯವಲ್ಲವಿವು ಶಿವತ್ರಿಶೂಲಗಳು ಶ್ರೇಷ್ಠ ಗ್ರಂಥ ತುಂಬ
ಪುಟಗಳಲ್ಲ ಸಂಪುಟಗಳಾಗಿಹವು ಜ್ಞಾನಸುಧೆಯು ತುಂಬಿ
ಸುಮನ ಭಾವ ಸೌರಭವ ಸೂಸುತಿದೆ ಸ್ವರ್ಗತೋಟ ನಂಬಿ [೪]

ಸರ್ವವೇದಗಳ ಸರ್ವಶಾಸ್ತ್ರಗಳ ಕೆನೆಯು ಬೆಣ್ಣೆಯೆನಲೇ
ದುಷ್ಟಕಾಮನನು ಸುಡಲು ತೆರೆದ ಶಿವ ಹಣೆಯ ಕಣ್ಣೆಯೆನಲೇ
ಬಿದ್ದ ಜನವ ಬಲು ತಿದ್ದೆ ಎದ್ದ ಉದ್ಬುದ್ಧ ಬಾಂಬುಯೆನಲೇ
ಅಜ್ಞಜನಕೆ ವರಸುಜ್ಞಸುಧಿಯ ಸುಧೆ ಪೂರ್ಣಜಾಂಬುಯೆನಲೇ [೫]

ಇಲ್ಲಿ ರಾವಣರು ರಾಮರಾಗುವರು ಗ್ರಂಥವನ್ನು ಓದಿ
ಕಂಸರಂಥವರು ಕೃಷ್ಣರಾಗುವರು ಸುಧಿಯ ಸುಧೆಯ ಮೋಡಿ
ರಾಮದೂತರಾಗುವರು ಹೇಡಿಗಳು ಮಾಡಿ ಇದರ ಸಂಗ
ಕಲ್ಲು ಕರಗಿ ಸವಿ ಬೆಲ್ಲವಾಗುವುದು ಪಾಪ ಪುಣ್ಯ ರಂಗ [೬]

ವಿಶ್ವವಿದ್ಯಗಳು ಹ್ರಸ್ವವಾಗುವವು ಗ್ರಂಥರತ್ನದಲ್ಲಿ
ಗಗನಯಾನಗಳು ಗುಬ್ಬಿಯಾದವೀ ಗ್ರಂಥರತ್ನದಲ್ಲಿ
ಅಗ್ನಿ ಶಕಟತಾ ಉದ್ದ ಬಾಲಹುಳ ಝರಿಯು ಇದರ ಮುಂದೆ
ಮೇರು ಪರ್ವತವು ಚೂರು ನೆಲ್ಲಿಯೀ ಗ್ರಂಥರತ್ನ ಮುಂದೆ [೭]

ವೀರನಾರಿಯರು ಶೂರ ನರವರರು ಎಲ್ಲಿ ಇರುವರಲ್ಲಿ
ಅವರ ಲೇಖನಿಯು ಅಗ್ನಿ ಚೆಲ್ಲುವದು ಶಬ್ದ ಕಿಡಿಗಳಲ್ಲಿ
ಯಾರ ಹೃದಯದೊಳು ಮತ್ತೆ ಮೆದುಳಿನೊಳು
ಉರಿವ ಪಂಜು ಇಹುದು
ಭುಜದಿ ಮಿಂಚುಗಳು ಮನದಿ ಗುಂಡುಗಳು
ಸಿಡಿವ ಪುಂಜವಿಹುದು [೮]

ಸತ್ತು ಬಿದ್ದ ಜನ ಮತ್ತೆಯೇಳುವುದು ಶಬ್ದ ಗುಂಡು ತಾಗಿ
ಕೋಣ ಸಹಿತ ಬಲು ಜಾಣವಾಗುವುದು ವಾಕ್ಯ ಬಾಣ ತಾಗಿ
ಶಬ್ದ ಸಿಡಿಲಿನಿಂ ಗರ್ವಪರ್ವತವು ಆಯಿತಯ್ಯ ಚೂರ್ಣ
ಜಗವನುದ್ಧರಿಪ ಅಸ್ತ್ರಶಸ್ತ್ರದಿಂ ಗ್ರಂಥವಿಹುದು ಪೂರ್ಣ [೯]

ಮನದ ರೋಗಗಳ ಕಳಿವ ಗ್ರಂಥವಿದು ನಿಜಕು ವೈದ್ಯಶಾಲೆ
ಮಲ್ಲರನ್ನು ಘನ ಮಲ್ಲರಾಗಿಸುವ ನಿಜಕು ಮಲ್ಲಶಾಲೆ
ಸತ್ಯಘಟನೆಗಳ ಸಚ್ಚರಿತ್ರೆಗಳ ಶಬ್ದ ಚಿತ್ರಶಾಲೆ
ಬಾಲವೃದ್ಧರನಿರುದ್ಧರಾಗುವೊಲು ಸಿದ್ಧ ಮಂತ್ರಶಾಲೆ [೧೦]

– 'ರಂಗನಾಮ', ರಂ.ರಾ. ಕುಲಕರ್ಣಿ ನಿಡಗುಂದಿ, ಗುರುಕುಲ ಕುಕನೂರ